ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಯೋಜನೆಗಳಲ್ಲಿ ಯಾವುವು ಫೈನಲ್ ಸ್ಟೇಜಿನಲ್ಲಿವೆ ?

ಶ್ರೀ ಪಿ. ಎಂ. ನಾಡಗೌಡ.—ಒಂದನೇ ಹಾಗೂ ಎರಡನೇ ಯೋಜನೆ ಫೈನಲ್ ಸ್ಟೇಜಿನಲ್ಲಿದೆ ಮತ್ತು ಇದಕ್ಕೆ ಅಪ್ರೂವಲ್ ಕೂಡ ಕೊಡಲಾಗಿದೆ. ಇನ್ನುಳಿದವುಗಳ ಅಂದಾಜಾಗಳು ಹೆಲ್ತ್ ಮತ್ತು ಇಂಜಿನೀಯರಿಂಗು ಇಲಾಖೆಗಳಲ್ಲಿ ಅವರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ಅವರಿಂದ ಎಂದನಂತರ ಸರಕಾರ ಇದನ್ನೂ ಕೂಡ ಮಂಜೂರು ಮಾಡುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕುಂದಗೋಳ ತಾಲ್ಲೂಕಿನಲ್ಲಿ ಸುಮಾರು 44 ಊರುಗಳಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲ ಎಂದು ಸರಕಾರಕ್ಕೆ ಅರ್ಜಿ ಕಳುಹಿಸಿರುವುದು ತಮ್ಮ ಗಮನಕ್ಕೆ ಎಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಕುಂದಗೋಳ ತಾಲ್ಲೂಕಿನಲ್ಲಿ ಒಂದು ತರಹದ ವಿಶಿಷ್ಟ ಪರಿಸ್ಥಿತಿ ಇದೆ. ಏಕೆಂದರೆ, ಇಲ್ಲಿ ಬರುವ ನೀರು ಕುಡಿಯಲು ಯೋಗ್ಯವಾದುದಲ್ಲ, ಇದು ಬ್ರೇಕಿಷ್ ಆಗಿದೆ ಎಂದು ಇದಕ್ಕಾಗಿ ನೇಮಿಸಿದ್ದ ಎಕ್ಸ್‌ಪರ್ಟ್ ಕಮಿಟಿಯವರು ಹೇಳಿದ್ದಾರೆ. ಅವರು ಹೇಳಿರುವುದನ್ನೇ ಇಲ್ಲಿ ಸಭೆಯ ಗಮನಕ್ಕೆ ತರುತ್ತೇನೆ. ಅವರ ಎಂದರೆ ಎಕ್ಸ್‌ಪರ್ಟ್ ಒಪ್ಪೀನಿಯನ್ ಕೊಟ್ಟಿದೆ :

> "In this taluk, due to breakish nature of the soil, sinking and constructing new drinking Water Wells was found not feasible. Besides sources of water are not found to be adequate and also fit for drinking purposes. The PWD authorities opined that bore wells may be tried. Accordingly, a test borewell at the village Hiremattu has been taken out of the funds allotted for LBW programme and this work is entrusted to the Executive Engineer, Dharwar, who sunk a bore-well up to a depth of 250 feet has opined that the water is breakish and quite unfit for drinking purpose."

ಇದರಿಂದಾಗಿ ಇಷ್ಟು ಹಣ ಇಲ್ಲಿ ಖರ್ಚು ಮಾಡಿದರೂ ಅದರಿಂದ ಜನಕ್ಕೆ ಅನುಕೂಲವಾಗುತ್ತಿಲ್ಲ ಮತ್ತು ಇದರಿಂದೇನೂ ಪ್ರಯೋಜನವಿಲ್ಲ ಎನ್ನುವುದು ಕಂಡುಬರುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ತಾಲ್ಲೂಕಿನ ಜನರನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವ ಯೋಚನೆ ಇದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇದನ್ನೂ ವಿಚಾರ ಮಾಡಬೇಕು.

Rural drinking water supply scheme in Chintamani

*Q.—388. Sri T. K. GANGI REDDY (Chintamani).—

Will the Minister for Development and Co-operation be pleased to state :—

(*a*) the number of villages in Chintamani Taluk wherein the work under Rural Drinking Water Supply Scheme has been taken up ;

(*b*) the number of villages in which it is possible to take up the said work this year ;

(*c*) the number of villages in the above taluk that would be supplied with drinking water during the IV Five Year Plan ?

A.—Sri P. M. NADGOUDA (Minister for Development and Co-operation).—

(*a*) One.
(*b*) Two.

(c) Every village, which has no drinking water facility, will be provided with a drinking water well in a phased programme during the IV Five Year Plan.

ಶ್ರೀ ಟಿ. ಕೆ. ಗಂಗಿರೆಡ್ಡಿ.—ನೀರಿನ ಸೌಲಭ್ಯವನ್ನು ಒದಗಿಸಲು ಯಾವ್ಯಾವ ಆಧಾರಗಳು ಇರಬೇಕೆಂದು ಸರಕಾರ ನೋಡಿ ಮಾಡುತ್ತದೆ !

†ಶ್ರೀ ಪಿ. ಎಂ. ನಾಡಗೌಡ.—ಸರಕಾರ ಇದರ ಬಗ್ಗೆ ವಿಚಾರ ಮಾಡುವಾಗ ಎಲ್ಲಿ ನೀರಿನ ಅಭಾವ ಇದೆ ಎಂದು ಗೊತ್ತಾಗುತ್ತೋ ಅಲ್ಲಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಅಲ್ಲಿನ ಜನಕ್ಕೆ ಕುಡಿಯುವ ನೀರನ್ನು ಒದಗಿಸಬೇಕು ಮತ್ತು ಇದಕ್ಕೆ ಮೊದಲು ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಸೂಚನೆ ಕೊಟ್ಟು ಕೆಲಸಗಳನ್ನು ಮಾಡಲಾಗುತ್ತದೆ ಮತ್ತು ನೀರಿನ ಸೌಕರ್ಯವನ್ನೂ ಒದಗಿಸಿಕೊಡುತ್ತೇವೆ.

ಶ್ರೀ ಟಿ. ಕೆ. ಗಂಗಿರೆಡ್ಡಿ.—ನುಮಾರು 40 ಹಳ್ಳಿಗಳವರು ಅನೇಕ ಅರ್ಜಿಗಳನ್ನೂ ಕೊಟ್ಟಿದ್ದರೂ ಇನ್ನೂ ಬಾವಿಗಳನ್ನು ಮಂಜೂರು ಮಾಡಲಿಲ್ಲ ಕಾರಣ ಏನು ?

ಶ್ರೀ ಪಿ. ಎಂ. ನಾಡಗೌಡ.—4 ನೇ ಪಂಚವರ್ಷಿಕ ಯೋಜನೆಯು ಒಂದು ಫೇಸ್ ಪ್ರೊಗ್ರಾಂ ಪ್ರಕಾರ ಎರಡ್ಮೂ ಹಳ್ಳಿಗಳಿಗೂ ಕುಡಿಯುವ ನೀರಿನ ಬಾವಿಯನ್ನು ಕೊಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಎ. ಮುನಿಯಪ್ಪ.—4 ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಂತ ಹಂತವಾಗಿ ಕೊಡುತ್ತೇವೆಂದು ಹೇಳಿದ್ದೀರಿ. ಈ 5 ವರ್ಷದ ಪ್ರಣಾಳಿಕೆ ಪ್ರಕಾರ ಪೂರೈಸುವುದಕ್ಕೆ ಮುಂಚೆ ಚಿಂತಾಮಣಿ ತಾಲ್ಲೂಕಿನಲ್ಲಿ ಬಾವಿ ಇಲ್ಲದೇ ಇರತಕ್ಕಂಥ ಗ್ರಾಮಗಳು ಎಷ್ಟು ಇವೆ ಎಂದು ಸರ್ವೆ ಮಾಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ವೆ ಮಾಡಿದೆ. ಈಗ ಅದರ ಮಾಹಿತಿ ಸಿಕ್ಕುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಈ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ ಅಂತ ಸರ್ವೆ ರಿಪೋರ್ಟ್ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ನೋಟೀಸ್ ಬೇಕಾಗುತ್ತದೆ. ಸರಕಾರದವರು ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿಯೂ ಬಾವಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ನೀರು ಸೌಕರ್ಯವಿಲ್ಲದ ಹಳ್ಳಿಗಳು ಉಳಿಯಬಾರದು ಎಂದು ಆದೇಶ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಒಂದು ವರ್ಷದೊಳಗೆ ಈ ಕಾರ್ಯಕ್ರಮವನ್ನು ಪೂರ್ತಿ ಮಾಡಬೇಕು ಎಂದೂ ಆದೇಶ ಕೊಟ್ಟಿದೆ.

ಶ್ರೀ ಎ. ಮುನಿಯಪ್ಪ.—ನಾನು ಮೈಸೂರು ದೇಶದಲ್ಲೆಲ್ಲಾ ಹಾಕಿಕೊಂಡಿರುವ ಕಾರ್ಯಕ್ರಮವನ್ನು ಕೇಳಲಿಲ್ಲ. ಚಿಂತಾಮಣಿ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ ಇಲ್ಲ ಎನ್ನುವ ಬಗ್ಗೆ ಏನಾದರೂ ಸರ್ವೆ ಮಾಡಿದ್ದೀರಾ ಅನ್ನುವುದನ್ನು ಮಾತ್ರ ಹೇಳಿ.

ಶ್ರೀ ಪಿ. ಎಂ. ನಾಡಗೌಡ.—ಸರ್ವೆ ಮಾಡಿದೆ.

ಅಧ್ಯಕ್ಷರು.—ಪುನಃ ಪುನಃ ಅದೇ ಪ್ರಶ್ನೆ ಕೇಳುತ್ತಿದ್ದೀರಿ.

Drinking water through taps in Huliyurdurga

*Q.—458. Sri N. HUTCHAMASTI GOWDA (Huliyurdurga).—

Will the Minister for Development and Co-operation be pleased to state :—

(a) the number of houses that are supplied with drinking water through taps by the Village Panchayat of Huliyurdurga in Kunigal Taluk ;

(b) the amount collected on such houses for supply of drinking water ;

(c) the reason for not supplying the drinking water now ?